ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕಿ

ಡಾ. ಶಾಂತಾ ಕರಡಿಗುಡ್ಡ ಅಭಿನಂದನ ಗ್ರಂಥ

# ಸಾರ್ಥಕ ಬದುಕು



ಸಂಪಾದಕರು :

ಡಾ. ಪ್ರಕಾಶ ಎನ್. ನರಗುಂದ

Scanned with OKEN Scanner

**Title-** Women Atrocities and Laws
- Dr. Parashuram C.

# ಮಹಿಳಾ ದೌರ್ಜನ್ಯ ಮತ್ತು ಕಾನೂನುಗಳು

## (Women Atrocity and laws)

– ಡಾ॥ ಪರಶುರಾಮ ಚಂದಪ್ಪ

**ಪೀಠಿಕೆ :**

ಹೆಣ್ಣು ಗಂಡೆಂಬ ಲಿಂಗಬೇಧದ ಆದಾರದ ಮೇಲೆ ಹುಟ್ಟಿಕೊಂಡಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡಿನಿಂದಾಗುತ್ತಿರುವ ಹೆಣ್ಣಿನ ಮೇಲಿನ ದೌರ್ಜನ್ಯಗಳ ಸಂಖ್ಯೆ ಅಸಂಖ್ಯಾತ, ಆದಿ ಅನಾದಿ ಕಾಲದಿಂದಲೂ ಮಹಿಳೆಯರ ಮೇಲೆ ಪುರುಷನಿಂದ ಶೋಷಣೆ ನಿರಂತರವಾಗಿ ನಡೆದುಕೊಂಡು ಬಂದಿರುವುದು. ಪುರುಷ ಪ್ರಧಾನ ಸಮಾಜದ ನಿರ್ಮಾಣಕ್ಕಾಗಿ ಧರ್ಮಶಾಸ್ತ್ರಕಾರರು ಸ್ತ್ರೀ ವಿರೋದಿ ವಿಚಾರಗಳನ್ನು ಮಂಡಿಸುತ್ತ ಧರ್ಮಗ್ರಂಥಗಳನ್ನು ತಿರುಚಿ ಬರೆಯುತ್ತ ಪುರುಷಪರವಾದ ಸ್ತ್ರಿ ವಿರೋದಿ ವಿಚಾರಗಳನ್ನು ಜನರ ಮನಸ್ಸಿನಲ್ಲಿ ತುಂಬುವುದರ ಮೂಲಕ ಸ್ತ್ರೀ ಬದುಕನ್ನು ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸಿ, ಅವಳಿಗಿರುವ ಎಲ್ಲ ರೀತಿಂಯು ಸ್ವಾತಂತ್ರ್ಯಗಳನ್ನು ಕಿತ್ತುಕೊಂಡು ನಿರಂತರ ದೌರ್ಜನ್ಯಕ್ಕೊಳಪಡಿಸಿರುವುದು ಪುರುಷ ಸಮಾಜದ ಅಮಾನವೀಯ ಕೃತ್ಯ, ಆಧುನೀಕರಣ, ಕೈಗಾರಿಕರಣ, ನಗರೀಕರಣ, ಜಾಗತಿಕರಣ ಶಿಕ್ಷಣ ಸಾಮಾಜಿಕ ಶಾಸನಗಳ ಪ್ರಭಾವದ ಹೊರತಾಗಿಯೂ ಸ್ತ್ರೀ ನಾಲ್ಕುಗೋಡೆಗಳ ಮಧ್ಯದಲ್ಲಿ ಮತ್ತು ಹೊರಗಡೆ ಸಾಕಷ್ಟು ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ಖಂಡನೀಯ ಹಾಗೂ ವಿಷಾದನಿಯ. ಪುರುಷಪ್ರದಾನ ಸಮಾಜದಲ್ಲಿ ಪುರುಷರು ಇಂದಿಗೂ ಸ್ತ್ರೀಯನ್ನು ಬೋಗದ ವಸ್ತುವನ್ನಾಗಿ ದ್ವಿತೀಯ ದರ್ಜೆಯ ವ್ಯಕ್ತಿಯನ್ನಾಗಿ ಕಾಣುವ ಪುರುಷನ ಸ್ತ್ರೀವಿರೊಧಿ ನೀತಿಯಿಂದಾಗಿ ಇಂದಿಗೂ ಸ್ತ್ರೀ ನಿರಂತರ ಪುರುಷ ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾಳೆ.

Scanned with OKEN Scanner

ಅರ್ಥ :

"ದೈಹಿಕವಾಗಿ ಮಾನಸಿಕವಾಗಿ ಸ್ತ್ರೀಯನ್ನು ಹಲ್ಲೆಗೊಳಪಡಿಸುವ ಅಥವಾ ಹಿಂಸಿಸುವ ಕೃತ್ಯಕ್ಕೆ ಮಹಿಳಾ ದೌರ್ಜನ್ಯ" ಎಂದು ಕರೆಯಲಾಗುವುದು.

"ಮಹಿಳೆ ಮತ್ತು ಪುರುಷರಿಂದ ಮಹಿಳೆಯರ ಮೇಲೆ ಎಸಗುವ ಹಿಂಸಾಕೃತ್ಯವನ್ನು ಮಹಿಳಾ ದೌರ್ಜನ್ಯ" ಎಂದು ಕರೆಯಲಾಗುವುದು.

ಸ್ತ್ರೀ ದೌರ್ಜನ್ಯಗಳ ಕುರಿತು ಇತ್ತೀಚೆಗೆ ಸಾಮಾಜಿಕ ಸಂಶೋದಕರು, ಸಮಾಜವಿಜ್ಞಾನಿಗಳು, ಸರ್ಕಾಗಳು, ಯೋಜನಾ ಆಯೋಗ, ರಾಷ್ಟ್ರ, ರಾಜ್ಯ, ಮಹಿಳಾ ಆಯೊಗಗಳು, ಸಾಮಾಜಿಕ ಕಾರ್ಯಕರ್ತರು, ಸಮಾಜ ಕಲ್ಯಾಣ ಇಲಾಖೆಗಳು, ಸಮಾಜಸುಧಾರಕರು ಸಮಾಜದ ಕಾಳಜಿಯಿರುವವರು, ಆಢಳಿತಗಾರರು ಮುಂತಾದ ಸ್ತ್ರೀಪರ ಸಂಘಟನೆಗಳೂ ಕೂಡಾ ಇತ್ತೀಚೆಗೆ ಸ್ತ್ರೀ ಸಂಬಂಧಿತ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡುತ್ತ, ದೌರ್ಜನ್ಯಗಳನ್ನು ಹತ್ತಿಕ್ಕುವುದರ ಕುರಿತು ಪ್ರಯತ್ನ ನಡೆಸಿದ್ದಾರಾದರೂ ಪ್ರಾಮಾಣಿಕ ಪ್ರಯತ್ನದ ಕೊರತೆ ಎದ್ದು ಕಾಣುತ್ತದೆ. ಸಮಸ್ಯೆಯನ್ನು ವೈಜ್ಞಾನಿಕವಾಗಿ ಅರ್ಥೈಸಿಕೊಂಡು ಸಮರ್ಥವಾಗಿ ಎದುರಿಸುವ ಪ್ರಯತ್ನ ನಡೆಯಬೇಕಾಗಿರುವುದು ಇಂದಿನ ಅವಶ್ಯಕತೆಗಳಲ್ಲೊಂದು.

ಶತಶತಮಾನಗಳುದ್ದಕ್ಕೂ ಭಾರತೀಯ ಸ್ತ್ರೀಯರು ಎದುರಿಸಿದ ಸಮಸ್ಯೆಗಳಿಂದ ಮುಕ್ತರಾಗಲು ಅಸಂಖ್ಯಾತ ಹೋರಾಟಗಳು ನಡೆಸಬೇಕಾಯಿತು ಸ್ವತಂತ್ರ ಭಾರತದ ಸಂವಿಧಾನವು ಸ್ತ್ರೀಪುರುಷರು ಸಮಾನರೆಂದು ಘೋಷಿದ ಮೇಲೆ ವಿವಿದ ಕ್ಷೇತ್ರಗಳಲ್ಲಿ ಅಭೂತಪೂರ್ವ ಸಾಧನೆಗಳೊಂದಿಗೆ ಸವಾನತೆಯತ್ತ ದಾಪುಗಾಲಿಟ್ಟಿದ್ದರೂ ಕೂಡ ಸ್ತ್ರೀಯರ ಪರಸ್ಥಿತಿ ಸಂಪೂರ್ಣ ಸುಧಾರಿಸಿದೆ ಎನ್ನುವಂತಿಲ್ಲ. ಸ್ತ್ರೀಯರ ವಿರುದ್ಧದ ದೌರ್ಜನ್ಯಗಳು, ಹಿಂಸಾಚಾರಗಳು ಅವರನ್ನು ಅಪಹರಿಸುವ, ಕೊಲೆಗೈಯುವ, ಬೆಂಕಿಹಚ್ಚಿಕೊಲ್ಲುವ ಅತ್ಯಾಚಾರ ನಡೆಸುವ ಪ್ರಕರಣಗಳು, ಭಾರತದಲ್ಲಿ ದಿನೇ-ದಿನೇ ಹೆಚ್ಚುತ್ತಲೆ ಇವೆ.

ಹುಟ್ಟಿದ ಪ್ರತಿಯೊಬ್ಬ ಹೆಣ್ಣುಮಕ್ಕಳು ಒಂದಲ್ಲ ಒಂದು ಕಾರಣಕ್ಕೆ ಕನಿಷ್ಠ ದೌರ್ಜನ್ಯಕ್ಕೊಳಗಾಗುತ್ತಿರುವುದಂತೂ ಸತ್ಯ. ಸ್ತ್ರೀ ಮೇಲಿನ ದೌರ್ಜನ್ಯ ಅವಳು ಹುಟ್ಟಿವುದಕ್ಕಿಂತ ಮುಂಚೆ ಭ್ರೂಣರೂಪದ ಮಗು ಮತ್ತು ತಾಯಿಯ ಮೇಲೆ ಗರ್ಭಪಾತಕ್ಕೆ ಬಲತ್ಕರಿಸುವುದರ ಮೂಲಕ ಸಂಭವಿಸುತ್ತಿದೆ. ಒಂದು ವೇಳೆ ಹೊರ ಬಂದರೂ ಜೀವನಪೂರ್ತಿ ಲೈಂಗಿಕ ಕಿರುಕುಳ, ಬಲತ್ಕಾರ, ಅಪಹರಣ

ಹೊತ್ತೊಯ್ಯುವಿಕೆ ಹೊಡೆಯುವ, ಬೈಯ್ಯುವ, ಕಾಡಿಸುವ, ಛೇಡಿಸುವ, ಓಡಿಸುವ, ಅವಮಾನಿಸುವ ವರದಕ್ಷಣೆ, ವೇಶ್ಯಾವಾಟಿಕೆ, ಮಾರಟ, ಅಸಭ್ಯ ವರ್ತನೆ, ಕೊಲೆ, ನಿಂದಿಸುವ ಅವಾಚ್ಯಶಬ್ಧಗಳ ಬಳಕೆ, ಕಪಾಳ ಮೋಕ್ಷ, ಯ್ಯಾಸಿಡ್ ಎರಚುವ, ಬಾರಿಸುವ, ಒದೆಯುವ ಕೂದಲು ಹಿಡಿದೆಳೆಯುವ ಮುಖ ಮೈ ಪರಚುವ ವಿವಸ್ತ್ರಗೊಳಿಸುವ ಕೋಲಿನಿಂದ ಗುರುತು ಮೂಡುವ ಮತ್ತು ರಕ್ತ ಚಿಮ್ಮುವಂತೆ ಹೊಡೆಯುವ, ಬೆಂಕಿ ಹಚ್ಚುವ, ನೇಣುಬಿಗಿಯುವ, ಕತ್ತುಲು ಕೋಣೆಯಲ್ಲಿಡುವ, ಗೃಹ ಬಂಧನ, ಮನೆಯಿಂದ ಹೊರದೂಡುವ ಕತ್ತು ಹಿಸುಕುವ, ಕೊನೆಗೆ ಕೊಲೆಮಾಡುವವರೆಗೂ ಸ್ತ್ರೀ ಮೇಲಿನ ದೌರ್ಜನ್ಯ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಕೇಂದ್ರ ಗೃಹ ಇಲಾಖೆ "ನ್ಯಾಷನಲ್ ಕ್ರೈಂ ರೆಕಾರ್ಡ್ಸ" ಬ್ಯೂರೊ ಸಂಸ್ಥೆಯ ವರದಿ ಪ್ರಕಾರ ವರದಕ್ಷಣೆ ಕಾರಣಕ್ಕೆ ಗಂಡ, ಅತ್ತೆ, ಮೈದುನ, ನಾದಿನಿಯರಿಂದ ದೌರ್ಜನ್ಯ ನಿರಂತರವಾಗಿ ಒಂದೇ ಸಮನೆ ಹೆಚ್ಚುತ್ತಾ ಇದೆ. 1983 ರಲ್ಲಿ 11603 ಪ್ರಕರಣಗಳ ವರದಿಯಾಗಿದ್ದರೆ, 1994 ರಲ್ಲಿ ಈ ಸಂಖ್ಯೆ 25946 ಕ್ಕೆ ಏರಿಕೆಯಾಗಿತ್ತು. 1994ರ ವರದಿಯಂತೆ ದಿನಕ್ಕೆ 17 ವರದಕ್ಷಣೆ ಸಾವು, 44 ನಿಮಿಷಕ್ಕೆ ಅಪಹರಣ, 47 ನಿಮೀಷಕ್ಕೆ ಮಾನಭಂಗಕ್ಕೆ ಸಂಬಂಧಪಟ್ಟಿದ್ದು. ಹೆಂಡತಿಯನ್ನು ಹೊಡೆಯುವ, ವಿದವೆಯರನ್ನು ಹಿಂಸಿಸುವ ಸ್ತ್ರೀ ಇಚ್ಛೆಗೆ ವಿರುದ್ಧವಾಗಿ ಸಂಭೋಗಕ್ಕಾಗಿ ಬಲತ್ಕರಿಸುವ ಪ್ರಕರಣಗಳಿಗೇನು ಕೊರತೆಯಿಲ್ಲ. ಎಷ್ಟೊ ಗಂಡಸರು ಹಣಕ್ಕಾಗಿ ಪತ್ನಿಯನ್ನು ಹಾಗೂ ಇತರ ಮಹಿಳೆಯರನ್ನು ಮಾರಾಟ ಮಾಡುತ್ತಿರುವ ಪ್ರಕರಣಗಳು ಸಾಕಷ್ಟಿವೆ ಬಡಹೆಣ್ಣು ಮಕ್ಕಳನ್ನು ನಂಬಿಸಿ, ಪ್ರೀತಿಸಿ, ಮದುವೆಯಾಗಿ ಮಾರಾಟ ಮಾಡುವ, ಮೊದಲ ಹೆಂಡತಿಯಿರುವಾಗಲೆ ಮತ್ತೊಬ್ಬಳನ್ನು ಮದುವೆಯಾಗುವ. ಮನೆಗೆಲಸದ ಹೆಂಗಸರ ಮೇಲೆ ಅಸಂಘಟಿತ ವಲಯದಲ್ಲಿ, ಕೃಷಿ ಕ್ಷೇತ್ರದಲ್ಲಿ, ಹೊಲಗದ್ದೆಗಳಲ್ಲಿ ಕಾರ್ಯನಿರ್ವಸುತ್ತಿರುವ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವೆಸಗುವ ಮುಂತಾದ ಪ್ರಕರಣಗಳು, ನಾಗರೀಕ ಸಮಾಜವನ್ನು ಬೆಚ್ಚಿಬಿಳಿಸುವ ಪ್ರಕರಣಗಳು, ನಮ್ಮ ನಿತ್ಯದ ಬದುಕಿನಲ್ಲಿ ನಮಗರಿವಿಲ್ಲದೆಯೆ ಸಂಭವಿಸುತ್ತಿವೆ. ಒಂದು ವೇಳೆ ಗೊತ್ತಿದ್ದರೂ ಮಹಿಳೆಯರ ಅಸಾಯಕತೆ ನಿಶಕ್ತ ಕಾನೂನುಗಳು, ರಾಜಕೀಯ ಆರ್ಥಿಕ ಅಧಿಕಾರಿಶಾಹಿಗಳ ದಬ್ಬಾಳಿಕೆಹಿಂದಾಗಿ ಏನನ್ನು ಮಾಡಲಾಗದ ಅಸಾಯಕ ಸ್ಥಿತಿಯಲ್ಲಿ ಮಹಿಳೆ ಇದೆಲ್ಲವೂ ಅನಿವಾರ್ಯ ಎಂಬಂತ ರೀತಿಯಲ್ಲಿ ಬದುಕುತ್ತಿದ್ದಾಳೆ.

ವಿಜ್ಞಾನ ತಂತ್ರಜ್ಞಾನ ಹೆಚ್ಚು ಅಳವಡಿಸಿಕೊಂಡಿರುವ ಮೆಟ್ರೋಮೆಗಾದಂತಹ ನಗರಗಳು ಮಹಿಳೆಯರ ಪಾಲಿಗೆ ಸುರಕ್ಷಿತ ತಾಣಗಳಾಗಿರದೆ ಭಯದ ತಾಣಗಳಾಗಿ ಮಾರ್ಪಟ್ಟಿವೆ. 2011 ರಲ್ಲಿ 97 ಅತ್ಯಚಾರ ಪ್ರಕರಣಗಳು ಬೆಂಗಳೂರು ನಗರದಲ್ಲಿಯೆ ಸಂಭವಿಸಿರುವುದು. ರಾಜ್ಯದ ಮಟ್ಟಿಗೆ ಹೆಳುವುದಾದರೆ 2010 ರಲ್ಲಿ 840, 2011 ರಲ್ಲಿ 906 ಪ್ರಕರಣಗಳು ಬೆಳಕಿಗೆ ಬಂದಿವೆ 2012 ರಲ್ಲಿ ದೆಹಲಿಯಲ್ಲಿ ವರದಿಯಾಗಿ ದಾಖಲಾದ 635 ಅತ್ಯಚಾರ ಪ್ರಕರಣದಲ್ಲಿ ಕೇವಲ ಒಬ್ಬನಿಗೆ ಮಾತ್ರ ಶಿಕ್ಷೆಯಾಗಿದೆ 16-12-2012 ರಲ್ಲಿ ದೆಹಲಿ ನಗರದಲ್ಲಿ ಚಲಿಸುತ್ತಿರುವ ಬಸ್ಸಿನಲ್ಲಾದ ಗ್ಯಾಂಗ್‌ರೇಪ್, 2013ರ ಮಣಿಪಾಲ ಗ್ಯಾಂಗರೇಪ್, ಮುಂಬಯಿ ಗ್ಯಾಂಗರೇಪ್ ಪ್ರಕರಣಗಳು ಅಸಂಖ್ಯಾತ ಕೊಲೆ,ವರದಕ್ಷಣೆ ಸಾವು ಮುಂತಾದ ಸ್ತ್ರೀ ಮೇಲಿನ ವಿವಿದ ರೂಪದ ದೌರ್ಜನ್ಯಗಳ ಸಂಖ್ಯೆಗಳನ್ನು ಗಮನಿಸುತ್ತಾ ಹೊದಾಗ ಸ್ತ್ರೀ ಜನ್ಮ ತುಂಬಾ ಶೋಚನಿಯ ವಾದುದ್ದು ಎಂಬ ಬಾವನೆ ಪ್ರತಿಯೊಬ್ಬರಲ್ಲಿಯು ಬರದೆ ಇರದು.

ಈ ಮೇಲಿನ ಎಲ್ಲ ರೀತಿಯ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಹತ್ತಿಕ್ಕುವುದಕ್ಕಾಗಿ ಘನ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಹಿಳಾಪರ ಕಾನೂನುಗಳನ್ನು ರೂಪಿಸಿವೆ. ಪ್ರಕರಣಗಳ ಗಂಭೀರತೆಯನ್ನಾಧರಿಸಿ ಕಾಲ-ಕಾಲಕ್ಕೆ ಕಾನೂನುಗಳನ್ನು ತಿದ್ದುಪಡಿಗೊಳಿಸಿ ಮಹಿಳಿಯರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಾ ಬಂದಿದ್ದು ಮಹಿಳಾಪರ ಕಾನೂನುಗಳು ಈ ರೀತಿ ಇವೆ.

**ಮಹಿಳಾ ದೌರ್ಜನ್ಯ ಹತ್ತಿಕ್ಕುವ ಕಾನೂನುಗಳು :**

1) 1954ರ ವಿಶೇಷ ವಿವಾಹ ಕಾಯ್ದೆ.
2) 1955ರ ಹಿಂದೂ ವಿವಾಹ ಕಾಯ್ದೆ.
3) 1956ರ ಹಿಂದೂ ಉತ್ತರಾಧಿಕಾರತ್ವ ಕಾಯ್ದೆ.
4) 1956ರ ಹಿಂದೂ ದತ್ತು ಮತ್ತು ಜೀವನಾಂಶಕ ಕಾಯ್ದೆ.
5) 1956ರ ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯವಹಾರ ಪ್ರತಿಬಂಧಕ ಕಾಯ್ದೆ.
6) 1961ರ ಪ್ರಸುತಿಕ ಸೌಲಭ್ಯ ಕಾಯ್ದೆ.
7) 1961ರ ವರದಕ್ಷಣೆ ನಿಷೇದ ಕಾಯ್ದೆ.
8) 1971 ರ ವೈಧ್ಯಕೀಯ ಗರ್ಭನಿವಾರಣ ಕಾಯ್ದೆ.

Scanned with OKEN Scanner

9) 1994ರ ಪ್ರಸವ ಪೂರ್ವ ಲಿಂಗ ಪರೀಕ್ಷೆ ನಿಷೇದ ಕಾಯ್ದೆ.

10) 1976ರ ಸಮಾನ ವೇತನ ಕಾಯ್ದೆ.

11) 1976 ರ ಕಾರ್ಖಾನೆಗಳ ತಿದ್ದುಪಡೆ ಕಾಯ್ದೆ.

12) 1983ರ ಅಪರಾದ ಕಾನೂನು ತಿದ್ದುಪಡೆ ಕಾಯ್ದೆ.

13) 1984ರ ಕುಟುಂಬ ನ್ಯಾಯಲಯ ಕಾಯ್ದೆ.

14) 1986ರ ಮಹಿಳೆಯರ ಅಸಭ್ಯ ಪ್ರತಿನಿಧಿಸುವಿಕೆ ಕಾಯ್ದೆ.

15) 1987ರ ಸತಿ ಆಚರಣೆಯ ಪ್ರತಿಬಂಧಕ ಕಾಯ್ದೆ.

16) 1986ರ ಮುಸ್ಲಿಂ ಮಹಿಳೆಯರ ಹಕ್ಕುಗಳ ಕಾಯ್ದೆ.

17) 1990ರ ರಾಷ್ಟ್ರೀಯ ಮಹಿಳಾ ಹಕ್ಕುಗಳ ಕಾಯ್ದೆ.

18) 2015ರ ಬಾಲಾಪರಾದಗಳ ತಿದ್ದುಪಡೆ ಕಾಯ್ದೆ.

ಈ ಮೇಲಿನ ಕಾನೂನುಗಳಲ್ಲದೆ ಭಾರತಿಯ ದಂಡಸಂಹಿತೆ (ಖ.ಕ.ಅ)ಯು ಸ್ತ್ರೀಯರ ರಕ್ಷಣೆಗಾಗಿ ಕಾರ್ಯನಿರ್ವಹಿಸುತಿದೆ. ಖ.ಕ.ಅ ಸೆಕ್ಷನ್ 363 ಮತ್ತು 373 ರಲ್ಲಿ ಹೆಳಲಾಗಿರುವಂತೆ ಅಪಹರಣ ಸ್ತ್ರೀಯರನ್ನು 376 ಲೈಂಗಿಕ ಅತ್ಯಾಚಾರಕ್ಕೆ ಒಳಗಾದವರನ್ನು 354ರಲ್ಲಿ ಸ್ತ್ರೀಯರ ಪಿಡನೆಗೆ ಸಂಬಂಧಿಸಿದ, 59 ಲೈಂಗಿಕ ಉಪಟಳ 304ಬಿ ವರದಕ್ಷಣೆ ಕೊಲೆ ಸಾವು,ಮುಂತಾದ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಭಾರತೀಯ ದಂಡಸಂಹಿತೆಯ ಪಾತ್ರ ಅತ್ಯಂತ ಪ್ರಮುಖವಾಗಿದೆ. ಅಲ್ಲದೆ ಮೇಲಿನ ಎಲ್ಲ ಮಹಿಳಾಪರ ಕಾನೂನುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೇಂದ್ರ ಸರಕಾರ 1992ರಲ್ಲಿ ರಾಷ್ಟೀಯ ಮಹಿಳಾ ಆಯೋಗವನ್ನು ರಚಿಸಿ ಮಹಿಳಾಪರ ಕಾರ್ಯನಿರ್ವಹಿಸಲು ರಾಷ್ಟ, ರಾಜ್ಯಮಟ್ಟದಲ್ಲಿ ಅನುಕೂಲ ಮಾಡಿಕೊಟ್ಟಿದೆ.

**ಸಲಹೆಗಳು ಅಥವಾ ಪರಿಹಾರೊಪಾಯಗಳು :**

1) ಪ್ರತ್ಯೆಕ ಮಹಿಳಾ ನ್ಯಾಯಲಯ ಸ್ಥಾಪನೆ.

2) ಪ್ರತ್ಯೆಕ ಮಹಿಳೆಯರ ವಿಚಾರಣೆ.

3) ಮಹಿಳಾ ನ್ಯಾಯಧೀಶರ ಮತ್ತು ವಕೀಲರ ನೇಮಕ.

4) ತ್ವರೀತಗತಿಯ ವಿಚಾರಣೆ.

5) ಕಠಿಣ ಕಾನೂನು ಜಾರಿಗೊಳಿಸುವುದು.

6) ಶಿಘ್ರ ಮತ್ತು ಉಗ್ರ ಶಿಕ್ಷೆಗಳನ್ನು ವಿದಿಸುವುದು.

7) ಸಾಮಾಜಿಕ ಬಹಿಷ್ಕಾರ.

8) ಕೌಟುಂಬಿಕ ಬಹಿಷ್ಕಾರ.

9) ರಾಜಕೀಯ ಅಧಿಕಾರದ ಸದ್ಬಳಕೆ.

10) ಮಹಿಳಾ ಶಿಕ್ಷಣಕ್ಕೆ ಒತ್ತು.

11) ಮಹಿಳೆಯರಿಗೆ ಕಡ್ಡಾಯ ಕಾನೂನು ಶಿಕ್ಷಣ ನೀಡುವುದು.

12) ಗ್ರಾಮೀಣ ಮತ್ತು ಹೊಬಳಿಗಳ ಮಟ್ಟದಲ್ಲಿ ಮಹಿಳಾ ಸಾಂತ್ವನ ಕೇಂದ್ರಗಳ ಸ್ಥಾಪನೆಗೆ ಒತ್ತು ಕೊಡುವುದು.

13) ಮಹಿಳಾಪರ ಕಾರ್ಯನಿರ್ವಹಿಸುವ ಸಮಾಜಸೇವಕರಿಗೆ ಪ್ರೋತ್ಸಾಹಧನ ನೀಡುವುದು.

**ಉಪಸಂಹಾರ :**

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸುತ್ತಾ ಬಂದಾಗ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಮೇಲಿನ ದೌರ್ಜನ್ಯಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ದೌರ್ಜನ್ಯ ತಡೆಯುದಕ್ಕಾಗಿ ಸರಕಾರ ರೂಪಿಸಿದ ಕಾನೂನುಗಳಲ್ಲಿ ಬಹುತೇಕ ಕಾನೂನುಗಳು ಕಾರ್ಯಚರಣೆಗೆ ಬರದೆ ಕಾಗದದ ರೂಪದಲ್ಲಿ ಉಳಿದುಕೊಂಡಿರುವುದರಿಂದ. ಇನ್ನೂ ಕೆಲವು ಕಾನೂನಿನಲ್ಲಿ ಕಠಿಣತೆಯಾಗಲಿ, ಶೀಘ್ರ ವಿಚಾರಣೆಯಾಗಲಿ, ಶಿಕ್ಷೆಯಾಗಲಿ, ಸಂದಂರ್ಭಕ್ಕೆ ತಕ್ಕಂತೆ ಕಾನೂನಿನಲ್ಲಿ ಹೊಸ ಬದಲಾವಣೆಗಳು ಇಲ್ಲದಿರುವುದರಿಂದ ಮತ್ತು ಅದಕ್ಷ, ಅಪ್ರಾಮಾಣಿಕ, ಭ್ರಷ್ಠ ರಾಜಕಾರಣಿಗಳು, ಅಧಿಕಾರಿಗಳ, ಶ್ರೀಮಂತರ, ಬಂಡವಾಳಶಾಹಿಗಳ ಹಣದಾಸೆಗೆ ಅಧಿಕಾರದಾಸಗೆ ಬಲಿಯಾಗಿ ಕೆಲಸಕ್ಕೆ ಬಾರದ ಅಸಾಯಕ ಸ್ಥಿತಿಯಲ್ಲಿ ಸುಮ್ಮನೆ ಕಾನೂನುಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಇವೆಲ್ಲವನ್ನು ಮೆಟ್ಟಿ ನಿಂತು ಕಾನೂನುಗಳು ತಮ್ಮ ನಿಜಸ್ವರೂಪದೊಂದಿಗೆ ಯಾರ ಕಪಿಮುಷ್ಠಿಯಲ್ಲಿಯೂ ಸಿಲುಕದೆ ಸ್ವತಂತ್ರವಾಗಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಿದ್ದೆಯಾದರೆ ಖಂಡಿತವಾಗಿಯೂ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಸಂಪೂರ್ಣವಾಗಿಯಲ್ಲದಿದ್ದರೂ ನಿರೀಕ್ಷೆಗೆಮಿರಿ ತಡೆಗಟ್ಟಬಹುದಾಗಿದೆ.

## ಆಕರ ಗ್ರಂಥಗಳು

1. ಮಹಿಳಾ ಅಧ್ಯಯನ ಪ್ರವೇಶ – ಚ.ನ. ಶಂಕರರಾವ್
2. ಸಾಮಾಜಿಕ ಸಮಸ್ಯೆಗಳು – ಪ್ರೊ.ಜಿ. ಸುಬ್ರಮಣ್ಯ
3. ಭಾರತದ ಸಾಮಾಜಿಕ ಸಮಸ್ಯೆಗಳು – ಚ.ನ. ಶಂಕರರಾವ್
4. ಭಾರತದ ಸಮಾಜ ಅಧ್ಯಯನ – ಎಸ್.ಜಿ. ಹಿರೇಮಠ
5. ಸ್ಪರ್ಧಾ ಸ್ಫೂರ್ತಿ.
6. ಸ್ಪರ್ಧಾ ವಿಜೇತ.
7. ದಿನ ಪತ್ರಿಕೆಗಳು.

■■

**SARTHAK BADUKU**
National Awardee Teacher
Dr. Shanta Karadigudd ABHINANDANDA GRANTH
Guledgudd, Taluku Guledgudd, Dist. Bagalkot - 587 203.

Editors : **Dr. Prakash N. Naragund**
Assistant Professor of Kannada
M.G.V.C. Degree College, Muddebihal.
Mob: +91 09986767832
**Shree Suresh Vagga**
Editor Suddi Anavaran (Weekly)
Guledgudd. Mob: +91 09916636449

Publisher : **Shri Vaibhav Publications**
Gadag

Copyright : Editor
Copies : 1000
ISBN : 978-81-937173-1-8
Year : 2019
Pages : 574+64 = 638
Paper : 70 GSM NS MAPLITHO
Price : 650
DTP : Shridevi M. Shekha

Printed at : J. P. PRINTS GADAG
Mobile : 9886708168

**'ಸಾರ್ಥಕ ಬದುಕು'**

ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಡಾ. ಶಾಂತಾ ಕರಡಿಗುಡ್ಡ ಅಭಿನಂದನಾ ಗ್ರಂಥ

ವರ್ಷ : 2019

ಹಕ್ಕು : ಸಂಪಾದಕರು

ISBN : 978-81-937173-1-8

ಕಾಗದ : 70 GSM NS MAPLITHO

ಪುಟಗಳು : 574+64 = 638

ಪ್ರತಿಗಳು : 1000

ಬೆಲೆ : ರೂ. 650/-

ಅಕ್ಷರ ಜೋಡಣೆ : ಶ್ರೀ ಚಂದ್ರಶೇಖರ ನೀಲಕಂಠಪ್ಪ ಉಂಕಿ

ಮುದ್ರಣ : ಜೆ. ಪಿ. ಪ್ರಿಂಟ್ಸ್, ಗದಗ.
9886708168